ತುಂಗಾ ಏತ ನೀರಾವರಿ ಯೋಜನೆ ಬಗ್ಗೆ

ಪ್ರಶ್ನೆ. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಾ ಏತ ನೀರಾವರಿಯನ್ನು ಹಿಂದಿನ ಆಯವ್ಯಯದಲ್ಲಿ ಸೇರಿಸಲಾಗಿತ್ತೇ ;

ಆ) ಸದರಿ ಕಾಮಗಾರಿಯ ಅಂದಾಜು ವೆಚ್ಚ ಎಷ್ಟು ;

ಇ) ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾದ ಕಾಲಾವಧಿ ಎಷ್ಟು ; ಮತ್ತು ಇದರಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಆಗುತ್ತದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳು).—

ಅ) ಇಲ್ಲ.

ಆ)
ಇ) } ಉದ್ಭವಿಸುವುದಿಲ್ಲ.

ಯಗಚಿ ಜಲಾಶಯ ಯೋಜನೆಯ ಬಗ್ಗೆ

ಪ್ರಶ್ನೆ. ಶ್ರೀ ಬಿ. ಹೆಚ್. ಲಕ್ಷ್ಮಯ್ಯ (ಬೇಲೂರು).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ, ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಯಗಚಿ ಅಣೆಕಟ್ಟು ಯೋಜನೆಯಿಂದ ಎಷ್ಟು ಎಕರೆ ಮುಳುಗಡೆಯಾಗುತ್ತದೆ ಮತ್ತು ಮುಳುಗಡೆಯಾಗುವ ಗ್ರಾಮಗಳ ಸಂಖ್ಯೆ ಎಷ್ಟು; (ತರಿ-ಖುಷ್ಕಿ ಜಮೀನಿನ ಪ್ರತ್ಯೇಕ ವಿವರ ಒದಗಿಸುವುದು)

ಆ) ಮುಳುಗಡೆಯಾಗುವ ಗ್ರಾಮಗಳ ಜನರಿಗೆ ಪುನರ್ ವಸತಿಗಾಗಿ ಸರ್ಕಾರದವರು ಹಾಕಿಕೊಂಡಿರುವ ಯೋಜನೆಗಳು ಯಾವುವು ;

ಇ) ಇದುವರೆಗೆ ಎಷ್ಟು ಗ್ರಾಮಗಳಲ್ಲಿ ಎಷ್ಟು ಎಷ್ಟು ಜನರಿಗೆ ಪರಿಹಾರ ಧನ ಹಾಗೂ ಭೂಮಿ ಕೊಡಲಾಗಿದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ೧೯೬೨ ಹೆಕ್ಟೇರುಗಳು ಹಾಗೂ ೧೩ ಗ್ರಾಮಗಳು ಮುಳುಗಡೆಯಾಗುವ ಪ್ರದೇಶದ ವಿವರಗಳು ಕೆಳಗೆ ಸೂಚಿಸಲಾಗಿದೆ.

೧)	ತೋಟ	೧೯ ಹೆಕ್ಟೇರು
೨)	ಖುಷ್ಕಿ	೪೦೫ ,,
೩)	ತರಿ	೧೨೧೪ ,,
೪)	ಖರಾಬ್ ಮತ್ತು ನದಿಪಾತ್ರ	೩೨೪ ,,
	ಒಟ್ಟು	೧೯೬೨ ,,

ಆ) ಹೊಸದಾಗಿ ಲಭಿಸಲಾಗುವ ಪುನರ್ವಸತಿ ಕೇಂದ್ರಗಳಲ್ಲಿ ರಸ್ತೆಗಳ ನಿರ್ಮಾಣ, ಶಾಲಾ ಭಜನ ಮಂದಿರ ದೇವಸ್ಥಾನ, ಪಂಚಾಯತ್ ಹಾಲ್, ಕುಡಿಯುವ ನೀರಿನ ಸೌಲಭ್ಯ ಮತ್ತಿತರ ನಿಗಧಿಪಡಿಸಲಾದ ಸೌಲಭ್ಯಗಳನ್ನೊದಗಿಸಲಾಗುವುದು.

ಇ) ೧೨ ಗ್ರಾಮಗಳ ೫೫೯ ಜನರಿಗೆ ೭೧.೫೦ ಲಕ್ಷ ರೂ.ಗಳ ಪರಿಹಾರ ಧನ ನೀಡಲಾಗಿದೆ ೯ ಗ್ರಾಮಗಳ ೪೫ ಜನಗಳಿಗೆ ಸುಮಾರು ೧೭೭ ಎಕರೆ ಭೂಮಿಯನ್ನು ನೀಡಲಾಗಿದೆ.